ಕಥೆ

# ಗಾಳಿಪಟ ಹಿಡಿದ ಹುಡುಗರು ಮತ್ತು ಆಕಾಶ



**ಮುದಿರಾಜ್ ಬಾಣದ್**

ಕಲೆ: ವೆಂಕಟ್ರಮಣ ಭಟ್

ವೆಂಕೋಬ ನಿಂತುಕೊಳ್ಳುವುದಕ್ಕೆ ಆಗದಷ್ಟು ಕುಡಿದಿದ್ದ. ಜೋಲಿ ಹೊಡೆಯುತ್ತ ಆ ಕಡೆಯೊಂದು ಈ ಕಡೆಯೊಂದು ತೊಡರುಗಾಲು ಹಾಕುತ್ತ ಮನೆಗೆ ಬಂದ. 'ನನ್ಗೆ ಗೊತ್ತದ ನಿನಗೆ ಮೀನು ಅಂದ್ರ ಆಗಿ ಬರದಿಲ್ಲೆಂದು. ಆದ್ರ ಈ ಜಿಲೇಬಿ ಮೀನನ್ನು ನೋಡಿ ತಡೀಲಾರದೆ ತಗೊಂಡು ಬಂದೆ ನೋಡು ಪಾರ್ವತಿ' ಎಂದು ಗುಳಿಬಿದ್ದ ಕಣ್ಣುಗಳನ್ನು ಪದೇ ಪದೇ ಬಡಿಯುತ್ತ ವೆಂಕೋಬ ಹೇಳಿದಾಗ, 'ಅಮ್ಮ, ಜಗ್ಗಿ ಹೊಟ್ಟೆ ಹಸಿವಾಗ್ಯಾದ ಬಡನಾ ಅಡಿಗಿ ಮಾಡು' ಅಂತ ಅಲ್ಲೇ ಕಟ್ಟೆ ಮೇಲೆ ಕುಳಿತಿದ್ದ ರಾಮು ತಲೆ ಎತ್ತದೆ ಹೇಳಿ ಒಂದು ಬಿಳಿ ಹಾಳೆಯಲ್ಲಿ ಚಿತ್ರ ಬರೆಯತೊಡಗಿದ. ಅಪರೂಪಕ್ಕೆ ಮನೆಗೆ ಬಂದ ಗಂಡ ಮತ್ತು ಅವನಿಷ್ಟದ ಜಿಲೇಬಿ ಮೀನನ್ನು ನೋಡಿ ಪಾರ್ವತಿ ಏನೂ ಮಾತಾನಾಡದೆ ವೆಂಕೋಬನ ಕೈಯಿಂದ ಮೀನನ್ನು ಕಿತ್ತುಕೊಂಡು ಅಡುಗೆ ಮನೆಗೆ ಹೋದಳು. ಒಂದು ಸಣ್ಣ ಬೊಗಣೇಲಿ ಮೀನಿನ ತುಂಡುಗಳನ್ನು ಹಾಕಿ ನೀರಿನಿಂದ ಸ್ವಚ್ಛಗೊಳಿಸಿ ಅದಕ್ಕೆ ಹಿಟ್ಟನ್ನು ಹಾಕಿ ತಿಕ್ಕಿ ತಿಕ್ಕಿ ತೊಳೆದು ಸ್ವಚ್ಛಗೊಳಿಸತೊಡಗಿದಳು. ಉಳಿದ ದಿನಗಳಲ್ಲಾದರೆ ಪಾರ್ವತಿ ಮೀನನ್ನು ಎಡಗೈಲಿನಲ್ಲೂ ಮುಟ್ಟುತ್ತಿರಲಿಲ್ಲ ಅವಳಿಗೆ ಮೀನಂದರೆ ಆಗಿ ಬರುತ್ತಿರಲಿಲ್ಲ. ವೆಂಕೋಬನೇ ಸ್ವಚ್ಛ ಮಾಡಿ ತೊಳೆದು ಅಡುಗೆ ಮಾಡಿದರೆ ಮಾತ್ರ ಉಣ್ಣುವುದಕ್ಕೆ ಬರುತ್ತಿದ್ದಳು. ಮೀನು ಮಾಡಿದ ಬೋಗಣಿಯನ್ನು ಸಹ ವೆಂಕೋಬನೆ ತಿಕ್ಕಿ ತೊಳೆದು ಇಡಬೇಕಾಗಿತ್ತು. ಆದರೆ, ಇವತ್ತು ಪಾರ್ವತಿ ತಾನೇ ತನ್ನ ಕೈಯಾರೆ ಮೀನನ್ನು ಸಣ್ಣಗೆ ಕೊಯ್ದು ಉಪ್ಪು ಮತ್ತು ಹಿಟ್ಟು ಹಾಕಿ ನೀರಿನಲ್ಲಿ ತೊಳೆದು, ಒಲೆ ಮೇಲೆ ಇಟ್ಟು ಎಣ್ಣೆ ಹಾಕಿ ಅದಕ್ಕೆ ಬೆಳ್ಳುಳ್ಳಿ, ಅಲ್ಲ ಕುಟ್ಟಿ, ಖಾರ, ಉಪ್ಪು, ಉಂಚೆಣ್ಣನ್ನು ನೀರಲ್ಲಿ ಹಾಕಿ ಅದರ ರಸವನ್ನು ಗಟ್ಟಿಯಾಗಿ ಹಿಂಡಿ ಮೀನಿನ ಸಾರು ಮಾಡತೊಡಗಿದಳು.

ಮೀನಿನ ವಾಸನೆ ಎಲ್ಲರ ಮೂಗಲ್ಲಿ ಹೊಕ್ಕು ಹಸಿವೆಯೆಂಬುದು ಬೆಟ್ಟದಷ್ಟಾಯಿತು. ಸರಸರನೆ ಒಂದು ಎಂಟು ಚಪಾತಿ ತಿಕ್ಕಿ ಮೀನಿನ ಸಾರಿನ ಜೊತೆ ಅನ್ನದ ತಪ್ಪಲಿ ತಂದು ಮುಂದೆ ಇಟ್ಟಳು. ಪಾರ್ವತಿ ಬೇಕು ಬೇಕಿಲ್ಲದೆ ಊಟ ಮಾಡಿ ಮುಗಿಸಿದಳು. ಊಟ ಮುಗಿಯುತ್ತಲೇ ರಾಮು ಅರ್ಧ ಇಳಿಸಿದ ಚಿತ್ರವನ್ನು ಬರೆಯುವುದರಲ್ಲಿ ಮುಖವಿಟ್ಟುಕೊಂಡು ಕುಳಿತ. ಒಂಟಿಯಾದ ಮುದುಕಿ ಕತ್ತಲ ಮನೆಯಲ್ಲಿ ಇಳಿಬಿದ್ದ ಜಂತೆಯನ್ನು ನೋಡುತ್ತಿರುವ ಚಿತ್ರಕ್ಕೆ ಮುಂದೇನು ಮಾಡಬೇಕು ಅಂತ ಪೆನ್ಸಿಲ್ ನೆಲಕ್ಕೆ ಬಡಿಯುತ್ತ ಯೋಚನೆ ಮಾಡತೊಡಗಿದ. ವೆಂಕೋಬ